

ತುಟಿಗಳನ್ನ ಸೋಂಕಿ ಗಂಗೆ ಅತಿ ಕೋಮಲವಾಗಿ
ಹೊಸ ರುಚಿಗಳು ಬೆರೆತಂಗೆ ಅತಿ ಮಧುರವಾಗಿ ||
ವಿಷಕಂಠಕೆ ಕೈ ಮುಗಿದಳು ಗಂಗೆ ಗೌರವದಿಂದ
ಜನರಿಗಾಗಿ ವಿಷವನುಂಡೆ ನಂಜೇ ನಿನಗೆ ಅಮೃತ ||

ಧನ್ಯಳಾದೆ ದೇವಾ ನಾನು ನೀನು ಕೈಯನಿಡಿಯಲು
ಪಾವನಾಯ್ತೆನ್ನ ಬದುಕು ನಿನ್ನ ತಲೆಯ ಮೆಟ್ಟಲು ||
ನಿನ್ನ ಪಾದ ಸನಿಹದಲ್ಲಿ ಚೂರು ಜಾಗ ಕೇಳಲು
ತಲೆಯ ಮೇಲೆ ಹೊತ್ತುಕೊಂಡೆ ಆತ್ಮ ಆತ್ಮ ಅಪ್ಪಲು ||

ಅಪ್ಪಣೆಕೊಡು ಹೊರಡುವೆನು ಕೇಳಿದಳು ದೀನಳಂಗೆ
ಆ ಮಾತನು ಆಡುವಾಗ ಗಂಗೆ ಕೊರಳು ಕಟ್ಟಿದಂಗೆ ||
ಅರ್ಪಿಸಿಕೊಂಡಂತೆ ತನ್ನೆ ನಡೆಯಲೋದಳು ಗಂಗೆ
ತುಂಬಿ ತುಳುಕಿ ಕಣ್ಣೀರು ಜಲಜಲನೆ ಜಾರಿದಂಗೆ ||

'ಪರಮಪಾಪಿಯಾದರೇನು ಗಂಗೆಯಲ್ಲಿ ಮುಳುಗಲು
ತೊಳೆದೋಗಲಿ ಪಾಪವೆಲ್ಲಾ ಇದುವೆ ನನ್ನ ವರ ನಿನಗೆ' ||
ಶಿವನ ವರ ನರ ನರದಿ ಹರಿದಂತೆ ಅಂತರ್ಗಂಗೆ
ನಮಿಸಿ ನಡೆದಳು ಗಂಗೆ ಸಡಗರಸಿ ಇಳಿಯುವಂಗೆ ||

ರಥವನೇರಿ ಭಗೀರಥನು ಶಂಖನಾದ ಮಾಡಿದನು
ಎಚ್ಚರಿಸಲು ಅಡ್ಡಿಯಾದ ಸಕಲವು ತೊಳಲುವಂಗೆ ||
ಜಾಹ್ನುಮುನಿಯ ಆಶ್ರಮವನ್ನು ಮುಳುಗಿಸಿದಳು ಗಂಗೆ
ಆ ಮುನಿಗೆ ಕೋಪ ಬಂದು ಗಟಗಟನೆ ಕುಡಿದನಂಗೆ ||

ಮುನಿಯ ಕಾಲನಿಡಿದು ಭಗೀರಥನು ಪ್ರಾರ್ಥಿಸಿದ
ಕರ್ಣದಿಂದ ತೂರಿ ಬಂದು ಜಾಹ್ನವಿಯಾದಳು ಗಂಗೆ ||
ಪುಣ್ಯಕೋಟಿಯಂತೆ ಗಂಗೆ ಮುನಿಗಳ ಹಿಂದಾಡಿದಂಗೆ
ಆರ್ಯಭೂಮಿಯಲ್ಲಾ ಆದಂತೆ ಪಾವನ ||

ಭಗೀರಥನ ದೆಸೆಯಿಂದ ಬುವಿಗೆ ಬಂದ ನೆಪದಿಂದ
ಭಾಗೀರಥಿಯಾಗಿಹಳು ಭರತಭೂಮಿ ಪುಣ್ಯದಿಂದ ||

